**Sanction of Loans or Grants to the Municipalities in the State.**

*Q.—281. Sri V. MASIYAPPA (Hiriyur).—

Will the Government be pleased to state :—

(*a*) whether they have sanctioned any loans or grants to the Municipalities in the State during the III Plan period for drinking water schemes, drainage schemes and House buildings schemes ;

(*b*) if so, the names of those Municipalities, the amount sanctioned and the year in which it was sanctioned (Scheme-war information may be furnished) ;

(*c*) whether these schemes were included in the III Five-Year Plan ?

*A.*—Sri K. PUTTASWAMY (Minister for Municipal Administration).—

(*a*) Yes.

(*b*) *Vide* Statement placed on the Table of the House. ‡

(*c*) Yes.

Sri V. MASIYAPPA.—How many of these projects were included in the Third Plan and how many were outside the Plan ?

Sri K. PUTTASWAMY.—It is not exactly included in the plan ; all these things were provided for in the Plan.

Sri V. MASIYAPPA.—Since how long has the Hiriyur Municipality been agitating for Town Water Supply Scheme and why was it not included in the Plan ?

Sri K. PUTTASWAMY.—So far as I know, the Hiriyur Municipality has been representing for the last two or three years.

Sri C. J. MUCKANNAPPA.—The Hon'ble Minister has inspected the Sira Town and seen the difficulties of the people there. Will Government consider the question of providing drinking water to Sira Town either by way of grant or by way of loan ?

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಸಿರಾ ಟೌನಿನಲ್ಲಿ ಕುಡಿಯುವ ನೀರಿನ ಅಭಾವ ತೀವ್ರವಾಗಿದೆ. ಹಿಂದೆ ಸಿರಾ ಮುನಿಸಿಪಾಲಿಟಿಗೆ ಸರ್ಕಾರದವರು ಒದಗಿಸಿಕೊಟ್ಟಂಥ ಹಣವನ್ನು ಅವರು ಕುಡಿಯುವ ನೀರಿನ ನರಬರಾಜು ವ್ಯವಸ್ಥೆಗೆ ಉಪಯೋಗ ಮಾಡಿಕೊಂಡಿಲ್ಲ ಎಂಬ ಅಂಶ ಕಂಡುಬಂದಿದೆ. ಈಗಿರತಕ್ಕ ಪರಿಸ್ಥಿತಿಯಲ್ಲಿ ಸಿರಾ ಮುನಿಸಿಪಾಲಿಟಿಯವರು ಸಾಲಪಡೆದು ನೀರು ನರಬರಾಜು ಮಾಡತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳತಕ್ಕ ಶಕ್ತಿ ಅವರಿಗೆ ಇಲ್ಲ. ಅದಕ್ಕೋಸ್ಕರ ಸರ್ಕಾರದವರೇ ಈ ಕೆಲಸವನ್ನು ಏತಕ್ಕೆ ತೆಗೆದುಕೊಳ್ಳಬಾರದು ಎಂದು ಯೋಚನೆ ಮಾಡುತ್ತಿದ್ದೇವೆ. ಸರ್ಕಾರದವರು ಈ ಬಗ್ಗೆ ಒಂದು ಗ್ಯಾರಂಟಿನ್ನು ವ್ಯವಸ್ಥೆ ಮಾಡಿ ನೋ ಫ್ರಾಫಿಟ್ ನೋ ಲಾಸ್ ಬೇಸಿಸ್ ಮೇಲೆ ಆಲ್ಲಿಗೆ ಏತಕ್ಕೆ ನೀರನ್ನು ಒದಗಿಸಬಾರದು ಎಂಬ ಅಂಶವನ್ನು ನಾವು ಪರಿಶೀಲನೆ ಮಾಡುತ್ತಿದ್ದೇವೆ.

‡ Copy placed in the Mysore Legislature Library No. 19 dated 7th April 1965.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಮುನಿಸಿಪಾಲಟಿಗಳಿಗೆ ಅಡ್‌ಹಾಕ್ ಬೇಸಿಸ್‌ಮೇರೆ ಗ್ರಾಂಟನ್ನು ಕೊಡುತ್ತಾ ಇದ್ದುದು ನಿಜವಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಈಗ ನೀರು ನರಬರಾಜಿಗೋಸ್ಕರ ಗ್ರಾಂಟನ್ನು ಕೊಡುತ್ತಿಲ್ಲ. ಸಾಲವನ್ನು ಕೊಡುತ್ತೇವೆ. ನಾವು ಎರಡನೆಯ ಪಂಚವಾರ್ಷಿಕ ಯೋಜನೆಯಿಂದ ಮೂರನೆಯ ಪಂಚವಾರ್ಷಿಕ ಯೋಜನೆಗೆ ಬಂದ ಕಾಲದಲ್ಲಿ ಆ ಯೋಜನೆಯ ಕೆಲಸಗಳಿಗೆ 9 ಕೋಟಿ ರೂಪಾಯಿಗಳು ಬೇಕಾಗಿತ್ತು. ಆದರೆ ಆ ಯೋಜನೆಗೆ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಒದಗಿಸಿದ್ದ ಹಣ 5 ಕೋಟಿ ರೂಪಾಯಿಗಳು. ಹಿಂದೆ ಮಾಡಿದಂಥ ಕೆಲಸಗಳನ್ನೆ ಮುಗಿಸುವುದು ಕಷ್ಟವಾಗಿದೆ.

Sri V. MASIYAPPA.—The Minister was pleased to observe that Hiriyur Municipality has been agitating for the last 2 or 3 years. May I know at what stage the estimate is pending; whether it is sanctioned?

Sri K. PUTTASWAMY.—I do not know. They wanted some money and we have approved of it.

2·00 P.M.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ಕಷ್ಟದಲ್ಲರತಕ್ಕಂಥ ಮುನಿಸಿಪಾಲಟಿಗಳಿಗೆ ಲೋನ್ ಕೊಟ್ಟರೆ ವಾಪಸು ಬರುವುದಿಲ್ಲ, ಉದಾಹರಣೆಗೆ ಸಿರಾಕ್ಕೆ ಲೋನ್ ಕೊಟ್ಟದ್ದು ವಾಪಸು ಬರದೆ, ಅದನ್ನು ನಾವೇ ತೆಗೆದುಕೊಂಡಿರುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಹಾಗೇನೆ ಅಭಾವ ಪ್ರದೇಶದಲ್ಲರತಕ್ಕಂಥ, ಪೀಕರಾಟದಲ್ಲರತಕ್ಕಂಥ ಗುಂಡ್ಲುಪೇಟೆ ಮತ್ತಿತರ ತಾಲ್ಲೂಕು ಮುನಿಸಿಪಾಲಟಿಗಳಿಗೂ ಹೀಗೆ ಲೋನ್ ಕೊಡುವುದಕ್ಕೆ ಬದಲು ಗ್ರಾಂಟು ಕೊಡುವುದಕ್ಕೆ ಸರಕಾರ ಪ್ರಯತ್ನ ಪಡುತ್ತದೆಯೆ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು 2-3 ಪ್ರಶ್ನೆ ಬೆರೆಸಿಬಿಟ್ಟು ಏನೇನೊ ಹೇಳಿಬಿಟ್ಟರು; ನಾನು ಅವರು ಹೇಳಿದಹಾಗೆ ಉತ್ತರ ಕೊಡಲಿಲ್ಲ. ನಾನು ಹೇಳಿದ್ದು, ಸಿರಾಕ್ಕೆ ಸರಕಾರವೆ ಏಕೆ ಒದಗಿಸಬಾರದು ಎಂದು ಪರಿಶೀಲನೆ ಮಾಡುತ್ತಿದ್ದೇವೆ ಎಂದು, ಅದರ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದೇವೆಂದು ಹೇಳಲಿಲ್ಲ. ಗುಂಡ್ಲುಪೇಟೆ ನೀರಿನ ವ್ಯವಸ್ಥೆಗೆ ಸಾಲ ಕೊಟ್ಟಿದ್ದೇವೆ, ವ್ಯವಸ್ಥೆ ಮಾಡಿಕೊಂಡಿದ್ದಾರೆ. ಸಾಲ ತೀರಿಸಿಲ್ಲ; ಮಾನ್ಯ ಸದಸ್ಯರು ಸಾಲ ತೀರಿಸುವ ಹಾಗೆ ಶಿಫಾರಸು ಮಾಡಿದರೆ I shall be very thankful.

ಶ್ರೀ ಎಸ್. ನುಬ್ಯಯ್ಯ ನಾಯಕ್.—ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ, ಕುಡಿಯುವ ನೀರಿನ ಯೋಜನೆ, ಚರಂಡಿ ಯೋಜನೆ ಮತ್ತು ಗೃಹ ನಿರ್ಮಾಣ ಯೋಜನೆಗಳಿಗೆ ಆಯಾ ಪೌರನಭೆಗಳಿಗೆ ಹಣ ವಿಂಗಡಿಸಿ ಇಟ್ಟಿದೆಯೊ, ಅಥವಾ ಇಡೀ ರಾಜ್ಯ ಮಟ್ಟದಲ್ಲಿ ಇಟ್ಟಿದೆಯೊ?

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಮೂರು ಅಂಶಗಳನ್ನು ಕೇಳಿದ್ದಾರೆ. ಗೃಹ ನಿರ್ಮಾಣ ವಿಚಾರದಲ್ಲಿ ಉತ್ತರ ಹೇಳಿರಾರೆ. ನೀರು ನರಬರಾಜು ಮತ್ತು ಒಳಚರಂಡಿ ವ್ಯವಸ್ಥೆಗೆ ರಾಜ್ಯಮಟ್ಟದಲ್ಲಿ ಇಟ್ಟಿದೆ.

ಶ್ರೀಮತಿ ಅನ್ನಪೂರ್ಣಾಬಾಯಿ ರಾಗಟೆ.—ಬೀದರ್ ಡಿಸ್ಟ್ರಿಕ್ಟ್‌ನಲ್ಲಿ ಯಾವ ಮುನಿಸಿಪಾಲಟಿಯವರಾದರೂ ಸರಕಾರದಿಂದ ಸಾಲ ಕೇಳಿದ್ದಾರೆಯೇ?

ಶ್ರೀ ಕೆ. ಪುಟ್ಟಸ್ವಾಮಿ.—ಸಾಮಾನ್ಯವಾಗಿ ಎಲ್ಲಾ ಮುನಿಸಿಪಾಲಟಿಯವರೂ ಕೇಳುತ್ತಾರೆ. ಆದರೆ ಕೊಡುವ ಶಕ್ತಿ ಇಲ್ಲದೆ ಪೀಕರಾಟವಾಗಿದೆ.

Mr. SPEAKER.—Question hour is over.